



### ನೀರು ಕಡಿಮೆ

ತಿಮ್ಮ: ನಿಮ್ಮ ಶರೀರದಲ್ಲಿ ನೀರಿನ ಪ್ರಮಾಣ ತುಂಬ ಕಡಿಮೆಯಾಗಿಬಿಟ್ಟಿದೆ.

ಗುಂಡ: ಹೌದು ಡಾಕ್ಟ್ರೇ, ಏನು ಮಾಡೋದು ಬಹಳ ದಿನ ಆಯಿತು. ಪಾನಿಪೂರಿಯನ್ನೇ ತಿಂದಿಲ್ಲ.

### ಪರಿಹಾರ

ಗುಂಡ: ಹೆಂಡತಿಯ ಜೊತೆ ಜಗಳ ಮಾಡುವ ಮೊದಲು ಎಲ್ಲ ಡಬ್ಬಿ ಮುಚ್ಚಳಗಳನ್ನು ಬಿಗಿ ಮಾಡಿ ಇಡು.

ತಿಮ್ಮ: ಯಾಕೆ ಹಾಗೆ ಮಾಡಬೇಕು?

ಗುಂಡ: ಜಗಳ ಮಾಡಿದ ನಂತರ ಅವಳೇ ಮೊದಲು ಮಾತಾಡುತ್ತಾ ನಿನ್ನತ್ತ ಬರುತ್ತಾಳೆ. ಡಬ್ಬಿಯ ಮುಚ್ಚಳ ತೆಗೆದು ಕೊಡಿ ಅಂತ.

### ಸಾಕ್ಷಿ

ತಿಮ್ಮ: ನಿಮ್ಮ ಟಿಕೆಟ್ ತೋರಿಸಿ.

ಗುಂಡ: ನಾನು ಬಸ್ಸಿನಲ್ಲಿ ಬರಲೇ ಇಲ್ಲ ಸರ್.

ತಿಮ್ಮ: ಅದಕ್ಕೆ ಏನು ಸಾಕ್ಷಿ?

ಗುಂಡ: ನನ್ನಲ್ಲಿ ಟಿಕೆಟ್ ಇಲ್ಲದಿರುವುದೇ ಸಾಕ್ಷಿ.

### ಕೆಟ್ಟ

ತಿಮ್ಮ: ನಿನ್ನ ರಿಜಲ್ಟ್ ಏಕೆ ಇಷ್ಟು ಕೆಟ್ಟದಾಗಿದೆ?

ಗುಂಡ: ಏನು ಮಾಡಲು ಆಗುತ್ತದೆ ಪಪ್ಪಾ, ಯಾವಾಗಲೂ ಒಳ್ಳೆಯವರಿಗೇ ಕೆಟ್ಟದಾಗುತ್ತದೆ.

### ಮುಂದೇನು

ತಿಮ್ಮ: ಮುಂದೇನು ಮಾಡಬೇಕೆಂದಿರುವೆ?

ಗುಂಡ: ಏನಾದರೂ ಮಾಡಿಯೇ ಮಾಡುತ್ತೇನೆ. ಆದರೆ ಬೀಗರ ಮನೆಗೆ ಹೋಗಿ ಅವರ ಮುಂದೆ ಕುಳಿತು ಏನು ಮಾಡಬೇಕೆಂದುಕೊಂಡಿರುವೆ ಅಂತ ಮಾತ್ರ ಕೇಳುವುದಿಲ್ಲ.

### ಎಲ್ಲಿಗೆ?

ತಿಮ್ಮ: ನೀನು ಸ್ವರ್ಗಕ್ಕೆ ಹೋಗುತ್ತಿಯೋ ಅಥವಾ ನರಕಕ್ಕೆ ಹೋಗುತ್ತಿಯೋ?

ಗುಂಡ: ನನ್ನ ಮೊಬೈಲ್ ಮತ್ತು ಚಾರ್ಜರ್ ತಂದು ಕೊಡಿ. ನಾನು ಎಲ್ಲಿಗೆ ಬೇಕಾದರೂ ಹೋಗ್ತಿನಿ.

ಹಸಿವು

ಗುಂಡ: ಮದುವೆ ಆಗುವುದಾದರೆ ರುಚಿ ರುಚಿ ಅಡುಗೆ ಮಾಡಲು ಬರುವವಳನ್ನೇ ಆಗು.

ತಿಮ್ಮ: ರುಚಿ ರುಚಿ ಅಡುಗೆ ಮಾಡುವವಳನ್ನೇ ಯಾಕೆ?

ಗುಂಡ: ಮದುವೆ ಆಗಿ ಸ್ವಲ್ಪ ದಿನಕ್ಕೆ ಪ್ರೀತಿ ಕಡಿಮೆ ಆಗಬಹುದು. ಆದರೆ, ಹಸಿವೆಯೇನೂ ಕಡಿಮೆ ಆಗುವುದಿಲ್ಲ.

### ಎಂಥ ಮನೆ?

ಗುಂಡ: ಸರ್, ನಾನು ಒಂದು ಮನೆ ಕಟ್ಟಿಸಬೇಕಿತ್ತು. ಎಷ್ಟು ದುಡ್ಡು ಬೇಕಾಗುತ್ತೆ.

ತಿಮ್ಮ: ಎಂಥ ಮನೆ ಬೇಕು. ಕೆಳಗಡೆ ಮನೆಗೆ ಎಂಟು ಲಕ್ಷ ಮೇಲಿನ ಮನೆಗೆ ನಾಲ್ಕು ಲಕ್ಷ.

ಗುಂಡ: ಹಾಗಾದರೆ ಮೇಲಿನದಷ್ಟೇ ಕಟ್ಟಿಕೊಡಿ.

ಮಾಸ್ಕ್

ಪದ್ದಿ: ಮೀಸೆಗೆ ಯಾಕೆ ಬಣ್ಣ ಹಚ್ಚಿಕೊಳ್ತೀರಿ ಹೇಗೂ ಮುಖಕ್ಕೆ ಮಾಸ್ಕ್ ಹಾಕಿಕೊಳ್ತಿರಲ್ಲ.

ಗುಂಡ: ನೀನೂ ಯಾಕೆ ಲಿಪ್‌ಸ್ಟಿಕ್ ಹಚ್ಚಿಕೊಳ್ತಿಯಾ? ಮಾಸ್ಕ್ ಹಾಕಿಕೊಳ್ತಿಯಲ್ಲ.

### ಟ್ರಾಫಿಕ್

ತಿಮ್ಮ: ಕ್ಲಾಸ್‌ಗೆ ಬರಲು ಯಾಕೆ ತಡವಾಯಿತು?

ಗುಂಡ: ಟ್ರಾಫಿಕ್ ಇತ್ತು ಸರ್.

ತಿಮ್ಮ: ಆದರೆ ಇದು ಆನ್‌ಲೈನ್ ಕ್ಲಾಸ್ ಅಲ್ಲಾ

ಗುಂಡ: ನೆಟ್‌ವರ್ಕ್ ಟ್ರಾಫಿಕ್ ಸರ್.

ಸಂಗ್ರಹ: ಶಿವಲೀಲಾ ಸೊಪ್ಪಿಮಠ

ಹೆಂಡತಿ: ರೀ ದಸರೆಯ ರಜೆಯಲ್ಲಾದರೂ ನಾವು ಎಲ್ಲೆಲ್ಲಿಗೆ ಪ್ರವಾಸ ಹೋಗಬಹುದೆಂದು ಈ ಗೈಡ್ ಪುಸ್ತಕ ಹೇಳುತ್ತದೆ.

ಗುಂಡ: ಆದರೆ, ನಾವು ಎಲ್ಲಿಗೂ ಹೋಗಲು ಸಾಧ್ಯವಿಲ್ಲವೆಂದು ನನ್ನ ಈ ಬ್ಯಾಂಕ್ ಪಾಸ್ ಬುಕ್ ಬ್ಯಾಲೆನ್ಸ್ ಹೇಳುತ್ತಿದೆ.

***

ಗೆಳೆಯ: ಲೋ ಗುಂಡ ಕಬಡ್ಡಿ ಆಟದ ವಿಶೇಷತೆ ಏನು?

ಗುಂಡ: ಇನ್ನೊಬ್ಬರ ಕಾಲೆಳೆದು ನಾವು ಮೇಲೆ ಬರುವುದೇ ಈ ಆಟದ ವಿಶೇಷತೆ.

ಗುಂಡ: ನೀವು ಯಾವ ಊರಿನಿಂದ ಬಂದದ್ದು?

ಅಪರಿಚಿತ: ಜಾರ್ಖಂಡ್

ಗುಂಡ: ಅಲ್ಲಾ, ರೈಲು ಬಸ್ಸು ಅಥವಾ ಕಾರಿನಲ್ಲಿ ಬರುವುದು ಬಿಟ್ಟು ಜಾರಿಕೊಂಡು ಯಾಕೆ ಬಂದ್ರಿ?

***

ಹೆಂಡತಿ: ರೀ... 'ಐ ವಾಂಟ್ ಟು ಸ್ಲೀಪ್' ಅಂದ್ರೆ ಏನು ಅರ್ಥ?

ಗುಂಡ: ನಾನು ಮಲಗಬೇಕು.

ಹೆಂಡತಿ: ರೀ ಮೊದಲು ನನ್ನ ಪ್ರಶ್ನೆಗೆ ಉತ್ತರ ಹೇಳಿ ಆಮೇಲೆ ಮಲಗಿ.

ಸಂಗ್ರಹ: ಎಂ.ಕೆ. ಮಂಜುನಾಥ್

